ಲಾರ್ಡ್ಸ್ ಅಂಗಳದಲ್ಲಿ ನಡೆದ ಇಂಗ್ಲೆಂಡ್ ಎದುರಿನ ದ್ವಿತೀಯ ಟೆಸ್ಟ್‌ನಲ್ಲಿಯೂ ಕೊನೆಯ ಕ್ರಮಾಂಕದ ಬ್ಯಾಟ್ಸ್‌ಮನ್‌ಗಳು ಗಮನ ಸೆಳೆದರು. ಬೌಲರ್‌ಗಳು 'ಬಾಲಂಗೋಚಿ' ಎಂಬ ಹಣೆಪಟ್ಟಿ ಅಳಿಸಿ ಹಾಕಿ ಈ ಪಂದ್ಯದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು. ಮೊಹಮ್ಮದ್ ಶಮಿ ಗಳಿಸಿದ ಅರ್ಧಶತಕ ಮತ್ತು ಬೂಮ್ರಾ ಅವರ 34 ರನ್‌ಗಳ ಬ್ಯಾಟಿಂಗ್ ತಂಡದ ಗೆಲುವಿಗೆ ಕಾರಣವಾಯಿತು.

ಕೆನಿಂಗ್ಟನ್ ಓವಲ್‌ನಲ್ಲಿ ನಡೆದ ಟೆಸ್ಟ್ ಪಂದ್ಯದ ಎರಡೂ ಇನಿಂಗ್ಸ್‌ನಲ್ಲಿ ಅರ್ಧಶತಕ ಬಾರಿಸಿದ ಶಾರ್ದೂಲ್ ಠಾಕೂರ್ ಭಾರತದ ಕೆಳಕ್ರಮಾಂಕವೂ ಬಲಿಷ್ಠ ಎನ್ನುವುದನ್ನು ಸಾಬೀತುಮಾಡಿದ್ದಾರೆ. ದೇಶಿ ಟೂರ್ನಿಗಳು ಮತ್ತು ಐಪಿಎಲ್‌ನಲ್ಲಿ ಉತ್ತಮ ಪ್ರದರ್ಶನ ತೋರಿ ರಾಷ್ಟ್ರೀಯ ತಂಡದಲ್ಲಿ ಗಮನ ಸೆಳೆಯುತ್ತಿದ್ದಾರೆ.

ವೇಗದ ಬೌಲರ್‌ಗಳಿಗೆ ಸ್ವರ್ಗದಂತಿರುವ ಆಸ್ಟ್ರೇಲಿಯಾ ಮತ್ತು ಇಂಗ್ಲೆಂಡ್‌ನಂಥ ಪಿಚ್‌ಗಳಲ್ಲಿ ಎದುರಾಳಿ ತಂಡದ 'ವೇಗದ ಶಕ್ತಿ'ಯನ್ನು ಎದುರಿಸುವುದು ಅಗ್ರ ಕ್ರಮಾಂಕದ ಬ್ಯಾಟ್ಸ್‌ಮನ್‌ಗಳಿಗೇ ಸವಾಲು. ಹೀಗಾಗಿ ಬಾಲಂಗೋಚಿಗಳು ಬೇಗನೆ ವಿಕೆಟ್ ಒಪ್ಪಿಸುವುದು ವಿಶೇಷವೆನಿಸಿರಲಿಲ್ಲ. ಈ ಬಾರಿ ಹಿಂದಿನ ವೈಫಲ್ಯ ಬದಿಗಿಟ್ಟು ಬ್ಯಾಟಿಂಗ್ ಮೂಲಕವೂ ಕೊನೆಯ ಕ್ರಮಾಂಕದ ಆಟಗಾರರು ರನ್ ಗಳಿಸಿದ್ದಾರೆ.

ದಶಕಗಳ ಹಿಂದೆ ಕೆಳ ಕ್ರಮಾಂಕದ ಬ್ಯಾಟ್ಸ್‌ಮನ್‌ಗಳು ಗಮನ ಸೆಳೆಯುತ್ತಿದ್ದರು. 2008ರಲ್ಲಿ ನ್ಯೂಜಿಲೆಂಡ್ ಎದುರಿನ ಪಂದ್ಯದಲ್ಲಿ ಎಂಟನೇ ಕ್ರಮಾಂಕದಲ್ಲಿ ಬ್ಯಾಟ್ ಮಾಡಿದ್ದ ವೆಸ್ಟ್ ಇಂಡೀಸ್‌ನ ಜೆರೊಮಿ ಟೇಲರ್, 2004ರಲ್ಲಿ ವೆಸ್ಟ್ ಇಂಡೀಸ್ ವಿರುದ್ಧದ ಪಂದ್ಯದಲ್ಲಿ ಬಾಂಗ್ಲಾದೇಶದ ಮೊಹಮ್ಮದ್ ರಫೀಕ್, 2010ರಲ್ಲಿ ನ್ಯೂಜಿಲೆಂಡ್ ಎದುರು ಎಂಟನೇ ಕ್ರಮಾಂಕದಲ್ಲಿ ಹರಭಜನ್ ಸಿಂಗ್,

**ಟಿ-20 ವಿಶ್ವಕಪ್‌ನ ಹಿಂದಿನ ಚಾಂಪಿಯನ್ನರು**

| ವರ್ಷ | ಆತಿಥ್ಯ ರಾಷ್ಟ್ರ | ಚಾಂಪಿಯನ್ | ರನ್ನರ್ಸ್ ಅಪ್ |
|---|---|---|---|
| 2007 | ದಕ್ಷಿಣ ಆಫ್ರಿಕಾ | ಭಾರತ | ಪಾಕಿಸ್ತಾನ |
| 2009 | ಇಂಗ್ಲೆಂಡ್ | ಪಾಕಿಸ್ತಾನ | ಶ್ರೀಲಂಕಾ |
| 2010 | ವೆಸ್ಟ್ ಇಂಡೀಸ್ | ಇಂಗ್ಲೆಂಡ್ | ಆಸ್ಟ್ರೇಲಿಯಾ |
| 2012 | ಶ್ರೀಲಂಕಾ | ವೆಸ್ಟ್ ಇಂಡೀಸ್ | ಶ್ರೀಲಂಕಾ |
| 2014 | ಬಾಂಗ್ಲಾದೇಶ | ಶ್ರೀಲಂಕಾ | ಭಾರತ |
| 2016 | ಭಾರತ | ವೆಸ್ಟ್ ಇಂಡೀಸ್ | ಇಂಗ್ಲೆಂಡ್ |

## ಐಪಿಎಲ್ ಸ್ಟಾರ್

### ಜಸ್‌ಪ್ರೀತ್ ಬೂಮ್ರಾ

ಪಂಜಾಬ್‌ನಲ್ಲಿ ಜನಿಸಿದ ಜಸ್‌ಪ್ರೀತ್ ಬೂಮ್ರಾ ಗುಜರಾತ್‌ನಲ್ಲಿ ಕ್ರಿಕೆಟ್ ಬದುಕು ರೂಪಿಸಿಕೊಂಡಿದ್ದಾರೆ. ವೇಗದ ಬೌಲರ್ ಬೂಮ್ರಾ 2013ರಲ್ಲಿ ದೇಶಿ ಕ್ರಿಕೆಟ್ ಟೂರ್ನಿಗೆ ಪದಾರ್ಪಣೆ ಮಾಡಿದ್ದರು. ತಮ್ಮ 19ನೇ ವಯಸ್ಸಿನಲ್ಲಿ ಐಪಿಎಲ್‌ನಲ್ಲಿ ಮುಂಬೈ ಇಂಡಿಯನ್ಸ್ ತಂಡದಲ್ಲಿ ಸ್ಥಾನ ಗಳಿಸಿದರು. 2019ರಲ್ಲಿ ಮುಂಬೈ ತಂಡ ಟೂರ್ನಿಯ ಚಾಂಪಿಯನ್ ಆಗಲು ಬೂಮ್ರಾ ಪ್ರಮುಖ ಪಾತ್ರ ವಹಿಸಿದರು. ಕಳೆದ ವರ್ಷ ಮುಂಬೈ ತಂಡ ಫೈನಲ್ ಪ್ರವೇಶಿಸಲು ಕಾರಣರಾಗಿದ್ದರು. ಬೌಲಿಂಗ್ ಮೂಲಕ ಮಾತ್ರ ಗಮನ ಸೆಳೆಯುತ್ತಿದ್ದ ಬೂಮ್ರಾ ಕಳೆದ ವರ್ಷದ ಡಿಸೆಂಬರ್‌ನಲ್ಲಿ ಆಸ್ಟ್ರೇಲಿಯಾದ ವೇಗಿಗಳ ಸ್ವರ್ಗದ ಪಿಚ್‌ನಲ್ಲಿ ಅಜೇಯ ಅರ್ಧಶತಕ ಗಳಿಸಿ ಬ್ಯಾಟಿಂಗ್‌ನಲ್ಲಿಯೂ ತಮ್ಮ ಸಾಮರ್ಥ್ಯ ತೋರಿದರು.



ಬೌಲಿಂಗ್ ಮಾತ್ರವಲ್ಲ, ರನ್ ಗಳಿಸಲೂ ಸೈ ಎಂದು ಬ್ಯಾಟ್ ಬೀಸುತ್ತಿರುವ ಜಸ್‌ಪ್ರೀತ್ ಬೂಮ್ರಾ

**ಈಗ ಹಳಬರ ಆರ್ಭಟದೊಂದಿಗೆ, ಹೊಸಬರ ಅಬ್ಬರಕ್ಕೆ ಹೊಸ ಅವಕಾಶವಾಗಿ 'ಐಪಿಎಲ್' ಮತ್ತು 'ಟ್ವೆಂಟಿ-20' ವಿಶ್ವಕಪ್ ಕ್ರಿಕೆಟ್ ವೇದಿಕೆಯಾಗಿ ಒದಗಿಬಂದಿವೆ.**